Q.P. Code – 50339

# ತೃತೀಯ ಬಿ.ಎ. ಪದವಿ ಪರೀಕ್ಷೆ
## ಸೆಪ್ಟೆಂಬರ್/ಅಕ್ಟೋಬರ್ 2013
## (ದೂರ ಶಿಕ್ಷಣ)
## ಕನ್ನಡ ಐಚ್ಛಿಕ ಪತ್ರಿಕೆ – ೩
## (DAC 410) – ಛಂದಸ್ಸು ಮತ್ತು ಹಳಗನ್ನಡ ಪಠ್ಯಗಳು
## (ಪಂಪ ಭಾರತ ಸಂಗ್ರಹ, ವಡ್ಡಾರಾಧನೆ ಮತ್ತು ಛಂದಸ್ಸು)

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

1. (ಅ) **ಒಂದರ** ಭಾವ ಸ್ವಾರಸ್ಯವನ್ನು ಬರೆಯಿರಿ : **7**

(೧) ನುಡಿವುದಂ ಪತಿ ಭಕ್ತಿಯ ಪೆಂಪಿಂ ನೀಂ ನುಡಿದ್ಯೆ ಪೆಱತಂದದಿಂ
ನುಡಿದೆಯಲ್ತೆ ಮದಾಯಮಮೋಘಂ ಸೂಟ್ಟುಡೆಯಲ್ಕೆನಗಕ್ಕಮಿ
ನ್ನೆಡೆಯೊಳೆಂದೆಮಂದೆಂದುದದೇಂ ತಪ್ಪಾದುದೆ ನಮ್ಮೊವಜರ್ ಜಸಂ
ಬಡೆದ ಭಾರ್ಗವರಪ್ಪುದಱಿಂದಂ ನಂಟರುಮಂಗಮಹೀಪತಿ॥

(೨) ಕಾಶ್ಯಪಿಯೆಂಬೊಳೆನಗೆ ತಂಗೆಯಿಲ್ಲ ಸೋಮಶರ್ಮನೆಂಬೊಂ ಮಯ್ದುನ
ನುಮಿಲ್ಲ ಸೂರ್ಯಮಿತ್ರನೆಂಬ ಪೆಸರೆನಗುಂಟು ನಿಮ್ಮ ಮಾವನಪ್ಪ ಸೂರ್ಯ
ಮಿತ್ರ ನಲ್ಲೆನೆಂದವರ್ಗ್ಗೆ ನುಡಿದುಂ ಮತ್ತಮಿಂತೆಂದಂ ನೀಮಾರ್ಗ್ಗರಾದೊಡ
ಮೇಂ ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬಟ್ಟುಯೊಳ್ ಬಂದಿರೊಪ್ಪಡೆ
ಬೈಕಂದಿರಿದು ಕಪ್ಪಡ ಮುಟ್ಟಿರುಳುಂ ಪಗಲುಮಲಸದೆ ನಿರ್ಬಂಧದಿಂದೋದಲಾರ್ಪಡೆ
ನಿಮ್ಮ ನೋದಿಸಲಕ್ಕುಂ

(ಆ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **4**

ದ್ರುಪದರಾಜ, ಘಟೋತ್ಕಚ, ಸೋಮದತ್ತೆ, ಸರ್ವರುಜಾಪಹಾರ.

2. **ಮೂರಕ್ಕೆ** ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ : **9**

(೧) ಅಮೇಧ್ಯದೊಳ್ ಕ್ರೀಡಿಸುವ ಬಾಳಕಂಬೊಲ್ ಕಾಲಮಂಬಱಿದೆ ಕಳೆದೆನ್

(೨) ದೇವಾ ನೀಂ ಗೆಲ್ದಿಯಾಂ ಸೋಲ್ತೆನುಂ ಸತ್ತೆನುಮ್

(೩) ನಿಜದೊಳೆ ಭೂಪರೆಂಬರವಿವೇಕಿಗಳ್

(೪) ಓಲಗಿಸಿ ಬಾಟ್ವುದೆ ಕಷ್ಟ ಮಿಳಾಧಿನಾಥರಂ

(೫) ಸಾಮಾನ್ಯಮೆ ಬಗೆಯೆ ಭವತ್ಕೇಶ ಪಾಶ ಪ್ರಪಂಚಂ



ಪು.ತಿ.ನೋ.

**Q.P. Code – 50339**

3. **ಒಂದು** ಪ್ರಶ್ನೆಗೆ ಉತ್ತರಿಸಿ : **10**

(೧) ಸುಕುಮಾರ ಸ್ವಾಮಿ ಕಥೆಯಲ್ಲಿ ಬರುವ ಉಪಕಥೆಗಳು ಯಾವ ತತ್ತ್ವಗಳ ಹಿನ್ನೆಲೆಯಲ್ಲಿ ನಿರೂಪಿಸಲ್ಪಟ್ಟಿವೆ? ವಿವರಿಸಿ.

(೨) ಸುಕುಮಾರ ಸ್ವಾಮಿಯ ವೈಭವ ಮತ್ತು ವೈರಾಗ್ಯವನ್ನು ಕುರಿತು ಬರೆಯಿರಿ.

4. **ಒಂದು** ಪ್ರಶ್ನೆಗೆ ಉತ್ತರಿಸಿ : **10**

(೧) ಕರ್ಣನಿಗೆ ಸೇನಾಧಿಪತಿ ಪಟ್ಟಕಟ್ಟುವ ಸಂದರ್ಭದಲ್ಲಿ ನಡೆದ ವಾದ ವಿವಾದದ ಪ್ರಸಂಗದ ಸ್ವಾರಸ್ಯವನ್ನು ಕುರಿತು ಬರೆಯಿರಿ.

(೨) ಭೀಮ ದುಶ್ಯಾಸನನನ್ನು ಕೊಂದು ದ್ರೌಪದಿ ಪ್ರತಿಜ್ಞೆಯನ್ನು ಪೂರೈಸಿದ ಭೀಕರ ಚಿತ್ರಣವನ್ನು ವಿವರಿಸಿ.

5. **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : **2 × 10 = 20**

(೧) 'ಕಂದ' ಶಬ್ದ ನಿಷ್ಪತ್ತಿಯನ್ನು ನಿರೂಪಿಸಿ. 'ಕಂದ' ಪದ್ಯದ ವಿಶೇಷ ಲಕ್ಷಣವನ್ನು ಉದಾಹರಣೆ ಸಹಿತ ವಿವರಿಸಿ.

(೨) ಷಟ್ಪದಿ ಎಂದರೇನು? ಅದರಲ್ಲಿರುವ ಬಗೆಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ.

(೩) ತ್ರಿಪದಿಯ ಲಕ್ಷಣ ಮತ್ತು ಬೆಳವಣಿಗೆಯನ್ನು ಕುರಿತು ಬರೆಯಿರಿ.

6. ಕೆಳಗಿನ **ಎರಡು** ಪದ್ಯಗಳಿಗೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿ : **2 × 5 = 10**

(೧) ಎನ್ನೊಳೆ ಮುನ್ನೆಮುಚ್ಚರಿಪನೇ ಒಡನೋದಿದನೆಂಬ ಮೇಳದಿಂ

(೨) ಮಕ್ಕಳ ನೆನೆಯದೆ ಪೆಂಡಿರ ನೋಡದೆ
ಲೆಕ್ಕಕ್ಕೆ ತಾರದೆ ನನ್ನ

(೩) ಇಂತು ಶಿವನುಂ ಚೆನ್ನನುಂ ತಣಿವುತಿರಲಿತ್ತ
ಸಂತ ಸುಖದಿಂದೆ ಭಾಸ್ಕರನುದಯವಾಗುತ್ತ

7. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. (**80** ಅಂಕಗಳ ಸ್ಕೀಮ್‌ನವರಿಗಾಗಿ **ಕಡ್ಡಾಯ** ಪ್ರಶ್ನೆ) : **10**

(೧) ಶಲ್ಯನು ಧರ್ಮರಾಯನ ಕೋಪಕ್ಕೆ ತುತ್ತಾದ ಸಂದರ್ಭವನ್ನು ಕುರಿತು ಬರೆಯಿರಿ.

(೨) ವಿದ್ಯುಚ್ಚೋರನ ಕಳ್ಳತನದ ಉದ್ದೇಶ ಮತ್ತು ಪರಿಣಾಮವನ್ನು ಕುರಿತು ಬರೆಯಿರಿ.